ಹೊಸ ರೂಪ ಪಡೆಯಿತು. ದಿನಾ ಫಿನಾಯಿಲ್ ಹಾಕಿ ಕೋಣೆ ವರೆಸುತ್ತಿದ್ದಳು ಚಂಪಾ. ಸುಭದ್ರಮ್ಮ ಹೇಳುವ ಹಾಗೆ ಕೋಣೆಗೆ 'ಆಸ್ಪತ್ರೆ ವಾಸನೆ' ಬಂದಿತ್ತು. ಗಾಳಿ ನುಗ್ಗುತ್ತದೆಯೆಂದು ಸದಾ ಮುಚ್ಚಿರುತ್ತಿದ್ದ ಕಿಟಕಿಯನ್ನು ಹಗಲು ಹೊತ್ತು ತೆರೆದಿಡುವ ಅಭ್ಯಾಸ ಶುರು ಮಾಡಿದಳು. ಕೋಣೆಯೊಳಗೆ ಬೆಳಕು ಬರತೊಡಗಿತು. ಹೊಸ ಗಾಳಿ ಹೊಕ್ಕಿತು. ಅಜ್ಜಮ್ಮ ಮಹಾನ್ ದೈವಭಕ್ತೆ ಎಂದು ಗೊತ್ತು ಮಾಡಿಕೊಂಡ ಮೇಲೆ ಕೋಣೆಯ ಒಂದು ಮೂಲೆಯಲ್ಲಿ ಒಂದು ಮಣೆ ಹಾಕಿ ಅದರ ಮೇಲೆ ಅವರ ಮೆಚ್ಚಿನ ದೇವರ ಫೋಟೊ ಇಟ್ಟು, ದಿವಸಾ ಮಣೆಯ ಸುತ್ತಾ ಶಂಖ, ಚಕ್ರ, ಗದಾ, ಪದ್ಮದ ರಂಗೋಲಿಯ ಎಳೆ. ಹಿತ್ತಲಿನಲ್ಲಿ ಸಮೃದ್ಧವಾಗಿ ಬಿಡುತ್ತಿದ್ದ ಹೂಗಳ ಅಲಂಕಾರ. ದೇವರ ಎದುರು ಒಂದರ್ಧ ಗಂಟೆಯಷ್ಟು ಉರಿಯುತ್ತಿದ್ದ ಸಣ್ಣ ಸೊಡರು. ಎರಡು ಊದುಬತ್ತಿ ಹಚ್ಚಿ ದೇವರ ಫೋಟೊದೆದುರು ಸುತ್ತಿಸಿ ಅಕ್ಕಿ ಹಾಕಿದ ಸಣ್ಣ ಲೋಟದಲ್ಲಿ ಹೂತಿಟ್ಟರೆ ಕೋಣೆ ಘಂ ಘಂ. ಮುದುಕಿಯ ಮುಖದ ಮೇಲೆ ಯಾವತ್ತೂ ಕಾಣದಿದ್ದ ಪರಮಸಂತೃಪ್ತಿಯ ಕಳೆ.

"ಪರ್‍ವಾಗಿಲ್ಲ ಮಾರಾಯ್ತೀ, ನಿಂಗೆ ತಲೆ ಉಂಟು..." ಎಂದು ಸುಭದ್ರಮ್ಮ ಶಭಾಷ್‌ಗಿರಿ ಕೊಡುವುದಕ್ಕೆ ಮತ್ತೂ ಒಂದು ಕಾರಣ ಸೇರಿಕೊಂಡಿತ್ತು. ಮುದುಕಿ ಹತೋಟಿ ತಪ್ಪಿ ಒಂದ ಮಾಡಿಕೊಂಡರೆ ಇಡೀ ಮೇಲುಹಾಸನ್ನು ಒಗೆಯಬೇಕಾದ ಶ್ರಮ ತಪ್ಪಿಸಿದ್ದಳು ಚಂಪಾ. ಹಾಸಿದ ಬೇಡ್‌ಶೀಟಿನ ಕೆಳಭಾಗದಲ್ಲಿ ಮಕ್ಕಳ ಹಾಸಿಗೆಗೆ ಹಾಕುವಂತೆ ಒಂದು ರಬ್ಬರ್ ಶೀಟ್ ಜೋಡಿಸಿ ಅದರ ಮೇಲೆ ಬಿಗಿಯಾಗಿ ಹಳೆಯ ಸೀರೆಯ ತುಂಡೊಂದನ್ನು ಹಾಸಿ ಮಲಗಿಸಿದರೆ ಮುಗಿಯಿತು. ಏನಾದರೂ ಪರಾಮೋಷಿಯಾದರೆ ಸೀರೆತುಂಡು ಒಗೆದು ಹಾಕಿದರೆ ಸೈ. ಮುದುಕಮ್ಮ ಮಲಗುವ ಲೇಪನ್ನು ಕಟ್ಟಗೆ ಕಾಯುವ ಬಿಸಿಲಲ್ಲಿ ಒಣಗಿಸಿ, ಕೋಲಿನಿಂದ ಬಡಿದು ಬಡಿದು ದೂಳು ಹಾರಿಸಿ, ತನ್ನ ತಿಳಿವಿಗೆ ದಕ್ಕಿದಷ್ಟು ಎಲ್ಲವನ್ನೂ ನೇರ್ಪಾಗಿಸಿದಳು ಚಂಪಾ. ಇಷ್ಟೆಲ್ಲಾ ಮುನ್ನೆಚ್ಚರಿಕೆ ವಹಿಸಿದ ಮೇಲೆ ಕೋಣೆಯಲ್ಲೇ ಕುಗುರುತ್ತಾ ಕೂರಬೇಕಾದ ಆವಶ್ಯಕತೆ ಕಮ್ಮಿಯಾಗಿತ್ತು. ಚಟುವಟಿಕೆಯಿಂದ ಮನೆಕೆಲಸ ಮಾಡುತ್ತಾ ಓಡಾಡಿಕೊಂಡಿದ್ದ ಜೀವಕ್ಕೆ ಮುಟ್ಟಾದಾಗ ಮೂರು ದಿನ ಕೂರುತ್ತಿದ್ದಂತೆ ಸದಾ ಮೂಲೆಯಲ್ಲಿ ಕೂತಿರುವುದು ಬೇಜಾರು ಅನ್ನಿಸತೊಡಗಿತ್ತು. ಅದೊಂದು ದಿನ ಸುಭದ್ರಮ್ಮನಲ್ಲಿ ಕೇಳಿದಳು ಚಂಪಾ,

"ಏನಾದ್ರೂ ಮನೆಕೆಲಸ ಇದ್ರೆ ಹೇಳಿ ಅಮ್ಮಾ, ಮಾಡ್ಕೊಡ್ತೀನಿ..."

"ಆಗುತ್ತೇನೇ ನಿಂಗೆ? ನೀ ಬಂದಿದ್ದು ಅತ್ತೇನ ನೋಡ್ಕಳ್ಳೋಕೆ..."

"ಆದ್ರೂ ಬೇಕಾದಷ್ಟು ಪುರುಸೊತ್ತಿರುತ್ತಲ್ಲ ನಂಗೆ..."

ದುಡಿಮೆಗೆ ಬಂದ ಜನ ಆಡುವ ಮಾತಾ ಇದು? ಸುಭದ್ರಮ್ಮ ಬಾಯಿ ಕಳೆದುಕೊಂಡು ಅವಳ ಮಕ ನೋಡಿದರು. ಕೆಲಸ ಕದಿಯುವ ಮೈಗಳ್ಳರೇ ಹೆಚ್ಚಿರುವಾಗ ಇನ್ನೂ ಕೆಲಸ ಕೊಡಿ ಅನ್ನುವವರನ್ನು ಅವರು ನೋಡಿರಲಿಲ್ಲ. ತಮ್ಮೆದುರು ನಿಂತ ಪ್ರಾಯ ತುಂಬಿ ತುಳುಕುವ ವಿಧವೆ ಹೆಣ್ಣನ್ನು ನೋಡಿ ಅವರಿಗೆ 'ಅಯ್ಯೋ...' ಅನಿಸಿಬಿಟ್ಟಿತು. 'ನಿನ್ನ ಗಂಡಂಗೆ ಏನಾಗಿತ್ತೇ?' ಎನ್ನುವ ಮಾತು ತುದಿನಾಲಿಗೆಗೆ ಬಂದರೂ ನುಂಗಿಕೊಂಡರು ಸುಭದ್ರಮ್ಮ, ಅವರ ಸ್ವಭಾವಕ್ಕೆ ವಿರುದ್ಧವಾಗಿ.

ಒಂದೊಂದಾಗಿ, ಒಂದೊಂದಾಗಿ ಮನೆಗೆಲಸಗಳು ಚಂಪನ ಹೆಗಲೇರಿದುವು. ತರಕಾರಿ ಹೆಚ್ಚು, ಕಾಯಿ ತುರಿ, ಊಟಕ್ಕೆ ಬಳ್ಳೆ ವರೆಸಿಡು, ಕರೆಂಟು ಇಲ್ಲದಿದ್ದಾಗ ಹುಳಿಗೆ ಅರೆದುಕೊಡು, ಎಲ್ಲರ ಊಟ ಆದ ಮೇಲೆ ಎಂಜಲೆಲೆ ತೆಗೆದು ಹಾಳೆಕಡ್ಡಿಯಿಂದ ಎಂಜಲು ಸಾರಿಸು, ಒಣಗಿದ ಬಟ್ಟೆ ಮಡಚಿಡು, ಕೆಲಸಕ್ಕೆ ಬರ ಎಲ್ಲಿ? ಸ್ವಯಂಕೃತಾಪರಾಧ. ಹಾಗೆಂದು ಪಶ್ಚಾತ್ತಾಪ ಪಡಬೇಕಾದ ಆವಶ್ಯಕತೆ ಇಲ್ಲದಂತೆ ಸುಭದ್ರಮ್ಮ ಅವಳಿಗೆ ಹೇಳಿಟ್ಟರು,

"ನಿನ್ನ ಕೆಲಸ ಅಲ್ದೇ ಇದ್ದಿದ್ದಕ್ಕೆ ಪುಗಸಟ್ಟೆ ಗೇಯಿಸ್ಕಳ್ಳಲ್ಲ ಕಣೇ. ಅದಕ್ಕೆ ಬೇರೇನೇ ದುಡ್ಡು ಕೊಡೋಕೆ